**FEBRUARY 18, 2025**

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಮಾರ್ಚ್ 3 ರಿಂದ, ವಿಧಾನಮಂಡಲ ಅಧಿವೇಶನ; ಮಾರ್ಚ್ 7 ರಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್ ಮಂಡನೆ.**
- **ಮುಂಬರುವ ಶೈಕ್ಷಣಿಕ ವರ್ಷದಲ್ಲಿ, 8 ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ, ವಿಶೇಷ ಕೌಶಲ ತರಗತಿ ಆರಂಭ.**
- **ಅರವಳಿಕೆ, ಪ್ರಸೂತಿ ಹಾಗೂ ಮಕ್ಕಳ ತಜ್ಞ ವೈದ್ಯರ, ಮಾಸಿಕ ವೇತನ ಹೆಚ್ಚಿಸಲು, ಆರೋಗ್ಯ ಇಲಾಖೆ ಕ್ರಮ.**
- **'ಸಾಫ್ಟ್ ಏರಿಯಾ ರಿಲೀಸ್' ಯೋಜನೆ; ಕಾಡಾನೆ ಪುನರ್ವಸತಿಗೆ, 2 ಸಾವಿರ ಹೆಕ್ಟರ್ ಮೀಸಲಿಡಲು, ರಾಜ್ಯ ಸರ್ಕಾರದ ಚಿಂತನೆ.**

<><><>

**ಈಗ ವಾರ್ತೆಗಳ ವಿವರ**

<><><>

**ಮಾರ್ಚ್ 7 ರಂದು, ಶುಕ್ರವಾರ, ರಾಜ್ಯ ಸರ್ಕಾರದ ಪ್ರಸಕ್ತ ಸಾಲಿನ ಬಜೆಟ್ ಮಂಡಿಸುವುದಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ. ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾರ್ಚ್ 3 ರಂದು ವಿಧಾನಮಂಡಲದ ಅಧಿವೇಶನ ಆರಂಭವಾಗಲಿದ್ದು, ಉಭಯ ಸದನಗಳನ್ನುದ್ದೇಶಿಸಿ, ರಾಜ್ಯಪಾಲರು ಭಾ 'ಣ ಮಾಡಲಿದ್ದಾರೆ. ಮಾರ್ಚ್ 4 ರಿಂದ ಮೂರು ದಿನಗಳ ಕಾಲ, ರಾಜ್ಯಪಾಲರ ಭಾ 'ಣದ ಮೇಲೆ, ಚರ್ಚೆ ಅವಧಿ ನಿಗದಿಯಾಗಿದೆ ಎಂದು ಮುಖ್ಯಮಂತ್ರಿ ಹೇಳಿದರು.**

<><><>

**ಇಂದಿನಿಂದ ಮೇ 10ರ ವರೆಗೆ, ರಾಜ್ಯಾದ್ಯಂತ ಇ–ಖಾತಾ ಅಭಿಯಾನ ನಡೆಯಲಿದೆ ಎಂದು, ಮುಖ್ಯಮಂತ್ರಿ ತಿಳಿಸಿದರು.**

<><><>

2025–26ನೇ ಸಾಲಿನ ರಾಜ್ಯ ಮುಂಗಡಪತ್ರ ಮಂಡನೆ ಹಿನ್ನೆಲೆ, ರೈತ ಸಂಘಗಳ ಪ್ರತಿನಿಧಿಗಳು ಹಾಗೂ ಮುಖಂಡರೊಂದಿಗೆ, ಮುಖ್ಯಮಂತ್ರಿಯವರು, ಬೆಂಗಳೂರಿನಲ್ಲಿ ಸಭೆ ನಡೆಸಿದರು. ಸಚಿವರಾದ ಚಲುವರಾಯಸ್ವಾಮಿ, ಕೆ.ವೆಂಕಟೇಶ, ಕೆ.ಎನ್. ರಾಜಣ್ಣ ಸೇರಿದಂತೆ, ರೈತ ಮುಖಂಡರು, ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

<><><>

ಮುಂಬರುವ ಶೈಕ್ಷಣಿಕ ವರ್ಷದಿಂದ ರಾಜ್ಯದಲ್ಲಿ, 8 ರಿಂದ 12ನೇ ತರಗತಿ ವರೆಗಿನ ಎಲ್ಲ ಮಕ್ಕಳಿಗೆ, ಪಠ್ಯದ ಜೊತೆ ಕೌಶಲ ತರಗತಿ ಆರಂಭಿಸಲು, ಶಿಕ್ಷಣ ಇಲಾಖೆ ಸಿದ್ಧತೆ ಕೈಗೊಂಡಿದೆ ಎಂದು, ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ. ಶಿವಮೊಗ್ಗದ ಚಾಲುಕ್ಯನಗರದ ಸಾಹಿತ್ಯ ಗ್ರಾಮದಲ್ಲಿ, ಎಸ್.ಬಂಗಾರಪ್ಪ ಅವರ ಹೆಸರಿನಲ್ಲಿ ಸ್ಥಾಪಿಸಲಾಗುತ್ತಿರುವ ಗ್ರಂಥಾಲಯಕ್ಕೆ, 5 ಲಕ್ಷ ರೂಪಾಯಿ ದೇಣಿಗೆಯನ್ನು, ಪರಿಷತ್ ಅಧ್ಯಕ್ಷ ಡಿ. ಮಂಜುನಾಥ ಅವರಿಗೆ ಹಸ್ತಾಂತರಿಸಿ, ಮಾತನಾಡಿದರು. ಕೌಶಲ ಅಭಿವೃದ್ಧಿ ತರಗತಿಯ ವಿವರಗಳನ್ನು ಸದ್ಯದಲ್ಲೇ ಪ್ರಕಟಿಸಲಾಗುವುದು ಎಂದರು.

<><><>

ರಾಜ್ಯದ ಪ್ರತಿ ವಸತಿ ಶಾಲೆಯಲ್ಲಿ, ಮಕ್ಕಳ ಸಲಹಾ ಪೆಟ್ಟಿಗೆ ಆರಂಭಿಸುವಂತೆ, ಮಕ್ಕಳ ರಕ್ಷಣಾ ಆಯೋಗ, ಎಲ್ಲ ಜಿಲ್ಲಾಡಳಿತಗಳಿಗೆ ನಿರ್ದೇಶನ ನೀಡಿದೆ ಎಂದು, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ ತಿಳಿಸಿದ್ದಾರೆ.ಬೀದರ್‌ನಲ್ಲಿ ಮಕ್ಕಳೊಂದಿಗೆ ಸಂವಾದ ನಡೆಸಿ, ತಮ್ಮ ಕಾರ್ಯಾಲಯದಲ್ಲಿ ಅಹವಾಲು ಸ್ವೀಕರಿಸಿ, ಅವರು ಮಾತನಾಡಿದರು. 1098 ಉಚಿತ ಸಹಾಯವಾಣಿಗೆ ಕರೆ ಮಾಡಿ, ದೂರು ಸಲ್ಲಿಸುವಂತೆ, ಮಕ್ಕಳಲ್ಲಿ ಜಾಗೃತಿ ಮೂಡಿಸಲು, ಜಿಲ್ಲಾಡಳಿತದ ಅಧಿಕಾರಿಗಳಿಗೆ ಅವರು, ಸೂಚಿಸಿದರು. ಮಕ್ಕಳ ಹಕ್ಕುಗಳ ರಕ್ಷಣೆಗಾಗಿ, 12 ಪ್ರಬಲ ಕಾಯ್ದೆಗಳಿವೆ. ಆದರೂ, ವರದಿಯೊಂದರ ಪ್ರಕಾರ, ದೇಶಾದ್ಯಂತ ಬಾಲ್ಯ ವಿವಾಹ, ಬಾಲಕಾರ್ಮಿಕ ಪದ್ಧತಿ ಇನ್ನೂ ಜೀವಂತವಾಗಿವೆ. ಒಂದು ಲಕ್ಷ 50 ಸಾವಿರ ಬಾಲ ಗರ್ಭಿಣಿಯರಿದ್ದಾರೆ. 59 ಸಾವಿರ ಬಾಲ್ಯ ವಿವಾಹಗಳನ್ನು ದೇಶಾದ್ಯಂತ ತಡೆಯಲಾಗಿದೆ ಎಂದು ಅವರು, ಹೇಳಿದರು.

<><><>

ಅಂತಾರಾಷ್ಟ್ರೀಯ ಖ್ಯಾತಿಯ ಅರ್ಥಶಾಸ್ತ್ರಜ್ಞ, ಧಾರವಾಡದ ಪ್ರೊಫೆಸರ್ ಗೋಪಾಲಕೃಷ್ಣ ಕಡೇಕೋಡಿ ಅವರು, ತಮ್ಮ ತಂದೆ ಕೆ.ಜಿ.ಕಡೇಕೊಡಿ ಅವರ ಸ್ಮರಣಾರ್ಥ, ಉತ್ತರಕನ್ನಡ ಜಿಲ್ಲೆ ಶಿರಸಿಯ ವಿದ್ಯಾನಗರ ರುದ್ರಭೂಮಿಯ ಆವರಣದಲ್ಲಿರುವ, 'ಕಣಜ' ಸಂಗ್ರಹಾಲಯಕ್ಕೆ, 500ಕ್ಕೂ ಹೆಚ್ಚು ಐತಿಹಾಸಿಕ ಮಹತ್ವದ, ಅಮೂಲ್ಯ ವಸ್ತುಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಯುವಜನರಿಗೆ ಹಿರಿಯರ ಅಪರಿಗ್ರಹ ಸ್ವಭಾವ ಪರಿಚಯಿಸುವ ಉದ್ದೇಶದಿಂದ, ವಿ.ಪಿ.ಹೆಗಡೆ ಅವರಿಗೆ, ತಮ್ಮ ತಂದೆಯ ಸಂಗ್ರಹದ ವಸ್ತುಗಳನ್ನು ಪ್ರೊಫೆಸರ್ ಗೋಪಾಲಕೃಷ್ಣ ಕಡೇಕೋಡಿ, ಹಸ್ತಾಂತರಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ, ಅವರು ಮಾಹಿತಿ ನೀಡಿದ್ದಾರೆ.

<><><>

ಪ್ರೊಫೆಸರ್ ಗೋಪಾಲಕೃಷ್ಣ ಕಡೇಕೋಡಿ ಧ್ವನಿ 45 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ x ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

**ರಾಜ್ಯದಲ್ಲಿ ಅರವಳಿಕೆ, ಪ್ರಸೂತಿ ಹಾಗೂ ಮಕ್ಕಳ ಚಿಕಿತ್ಸೆ ತಜ್ಞ ವೈದ್ಯರ, ಮಾಸಿಕ ವೇತನ ಹೆಚ್ಚಿಸಲು, ಕ್ರಮ ಕೈಗೊಳ್ಳಲಾಗುವುದು ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ ತಿಳಿಸಿದ್ದಾರೆ. ಮಂಗಳೂರಿನಲ್ಲಿ ಆಯೋಜಿತ, ದಕ್ಷಿಣಕನ್ನಡ ಜಿಲ್ಲೆಯ ಕರ್ನಾಟಕ ಅಭಿವೃದ್ಧಿ ಯೋಜನೆಗಳ, ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು. ವಿಧಾನ ಪರಿ ’ತ್ ಸದಸ್ಯ ಧನಂಜಯ ಸರ್ಜಿ ಪ್ರಸ್ತಾಪಿಸಿದ ವಿಷಯಕ್ಕೆ, ಪ್ರತಿಕ್ರಿಯಿಸಿದ ಸಚಿವರು, ತಜ್ಞ ವೈದ್ಯರ ನೇಮಕಾತಿಗೆ ಕ್ರಮ ಕೈಗೊಳ್ಳಲಾಗುವುದು. ರಾಜ್ಯದ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ, ವೈದ್ಯರು ಹಾಗೂ ಸಿಬ್ಬಂದಿ ಹಾಜರಾತಿ ಖಾತ್ರಿ ಪಡಿಸಲು, ತಾಂತ್ರಿಕ ಹಾಜರಾತಿ ವ್ಯವಸ್ಥೆ ಜಾರಿಗೊಳಿಸಲಾಗುವುದು ಎಂದರು.**

<><><>

**ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ – ಬ್ರಿಮ್ಸ್ ನ, ಪ್ರಸೂತಿ ಮತ್ತು ಸ್ತ್ರೀ ಆರೋಗ್ಯ ತಜ್ಞರ ತಂಡ, ಕಳೆದ 45 ದಿನಗಳ ಅವಧಿಯಲ್ಲಿ, ತೊಡಕಿನ ಗರ್ಭಧಾರಣೆ ಹಾಗೂ ಹೆರಿಗೆಯಿಂದಾಗಿ, ಗಂಭೀರ ಸ್ಥಿತಿಯಲ್ಲಿದ್ದ, 6 ಜನ ತಾಯಂದಿರನ್ನು ರಕ್ಷಿಸಿ, ಗಮನ ಸೆಳೆದಿದೆ. ತಜ್ಞ ವೈದ್ಯೆ, ಡಾಕ್ಟರ್ ಉಮಾ ದೇಶಮುಖ್ ನೇತೃತ್ವದ ಪ್ರಸೂತಿ ತಜ್ಞರ ತಂಡ, ತಾಯಂದಿರ ಜೀವ ಉಳಿಸಿ, ಶ್ಲಾಘನೆಗೆ ಪಾತ್ರವಾಗಿದೆ ಎಂದು, ಬ್ರಿಮ್ಸ್ ನಿರ್ದೇಶಕ ಡಾಕ್ಟರ್ ಶಿವಕುಮಾರ ಶಟಕಾರ್, ಆಕಾಶವಾಣಿಗೆ ತಿಳಿಸಿದ್ದಾರೆ.**

<><><>

**ಬೆಳೆ ನ ್ಟ ಮತ್ತು ಜೀವ ಹಾನಿಗೆ ಕಾರಣವಾಗುವ, ನಾಡಿಗೆ ನುಗ್ಗುವ ಕಾಡಾನೆಗಳಿಗೆ, ಪುನರ್ವಸತಿ ಕಲ್ಪಿಸುವ, ‘ಸಾಫ್ಟ್ ಏರಿಯಾ ರಿಲೀಸ್’ ಯೋಜನೆ ಅನು ್ಠಾನಕ್ಕೆ, 2 ಸಾವಿರ ಹೆಕ್ಟರ್ ಪ್ರದೇಶ ಗುರುತಿಸಲು, ರಾಜ್ಯ ಸರ್ಕಾರ ಚಿಂತನೆ ನಡೆಸಿದೆ ಎಂದು, ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ತಿಳಿಸಿದ್ದಾರೆ. ಮಡಿಕೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಕೊಡಗು ಜಿಲ್ಲೆಯಲ್ಲಿ, ಕಾಡಾನೆಗಳ ಗಂಭೀರ ಆತಂಕವನ್ನು ಎದುರಿಸುತ್ತಿರುವ ಪಂಚಾಯ್ತಿ ವ್ಯಾಪ್ತಿಯ, ಕಂದಕಗಳ ರಿಪೇರಿ, ರೇಲ್ವೆ ಕಂಬಿ ಬೇಲಿಯ ದುರಸ್ತಿಗೆ, 21 ಕೋಟಿ ರೂಪಾಯಿ ಸರ್ಕಾರ ಬಿಡುಗಡೆ ಮಾಡಿದೆ. 2 ಸಾವಿರ ಆನೆಗಳು ಕೊಡಗು ಜಿಲ್ಲೆಯಲ್ಲಿದ್ದು, 200 ರಷ್ಟು ಆನೆಗಳು, ಕಾಫಿ ತೋಟಗಳನ್ನೇ ತಮ್ಮ ಆವಾಸ ಸ್ಥಾನವಾಗಿಸಿಕೊಂಡಿವೆ ಎಂದರು.**

<><><>

**ಬೆಂಗಳೂರಿನ ಸಹಜ ಸಾವಯವ ರೈತ ಉತ್ಪಾದಕರ ಕಂಪೆನಿ ನಿಯಮಿತ, ರೈತರದ್ದೇ ಆದ ಮಾರುಕಟ್ಟೆಯೊಂದನ್ನು ಹೊಂದುವ ಸದುದ್ದೇಶದಿಂದ, 15 ವರ್ಷಗಳ ಹಿಂದೆ, ರೈತರ ಹೂಡಿಕೆಯೊಂದಿಗೆ ಕಾರ್ಯಾರಂಭಿಸಿತು. 28 ಕೋಟಿ ರೂಪಾಯಿ ವಹಿವಾಟು, 60 ಜನ ಸಿಬ್ಬಂದಿ ಹಾಗೂ ಸಾವಿರಕ್ಕೂ ಹೆಚ್ಚು ಪಾಲುದಾರರಾದ ರೈತರ ದುಡಿಮೆಯಿಂದ, ಸಾವಯವ ಉತ್ಪನ್ನಗಳನ್ನು ಮೌಲ್ಯವರ್ಧಿಸಿ, ಗ್ರಾಹಕರಿಗೆ ತಲುಪಿಸುವಲ್ಲಿ, ಯಶಸ್ವಿಯಾಗಿದೆ. ಸಹಜ ಆರ್ಗ್ಯಾನಿಕ್ಸ್ ಅಧ್ಯಕ್ಷ ಎನ್.ಆರ್.ಶೆಟ್ಟಿ ಅವರ ನೇತೃತ್ವದಲ್ಲಿ, ಕರ್ನಾಟಕದ ಮೊದಲ ರೈತ ಉತ್ಪಾದಕರ ಕಂಪನಿಗೆ ಈಗ 16ನೇ ವರ್ಷದ ಸಂಭ್ರಮದಲ್ಲಿದ್ದು, ಪ್ರದೇಶ ಸಮಾಚಾರಕ್ಕಾಗಿ ಸಹಜ ಸಾವಯವ ಉತ್ಪಾದಕರ ಕಂಪನಿ ಸಿ.ಇ.ಒ., ಬಿ.ಸೋಮೇಶ ತಮ್ಮ ಸಂತಸ ಹಂಚಿಕೊಂಡಿದ್ದಾರೆ.**

<><><>

**ಬಿ.ಸೋಮೇಶ ಧ್ವನಿ 40 ಸೆಕೆಂದುಗಳು**

<><><>

ಬೆಳಗಾವಿಯ ಮರಾಠಾ ಲಘು ಪದಾತಿ ದಳದ ಕೇಂದ್ರದಲ್ಲಿ, ಯುದ್ಧ ಗಾಯಾಳುಗಳ ಪ್ರತಿಷ್ಠಾನದ ವತಿಯಿಂದ, ಗಾಯಗೊಂಡ ಯೋಧರ ಸಾಮರ್ಥ್ಯ ವೃದ್ಧಿಯ, ವಿಶೇಷ ಕಾರ್ಯಕ್ರಮವನ್ನು ಇಂದು ಆಯೋಜಿಸಲಾಗಿದೆ ಎಂದು, ಪ್ರತಿಷ್ಠಾನದ ಅಧ್ಯಕ್ಷ, ವಿಶ್ರಾಂತ ಲೆಫ್ಟಿನೆಂಟ್ ಜನರಲ್ ಆಸಿಫ್ ಮಿಸ್ತ್ರಿ ತಿಳಿಸಿದ್ದಾರೆ. ಬೆಳಗಾವಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಯುದ್ಧದಲ್ಲಿ ವಿರೋಚಿತವಾಗಿ ಹೋರಾಡಿ ಗೆದ್ದು, ಗಾಯಗೊಳ್ಳುವ ಯೋಧರು, ಬಳಿಕ ಬದುಕಿನ ಯುದ್ಧವನ್ನು ಎದುರಿಸಬೇಕಾಗುತ್ತದೆ. ಜೀವನದುದ್ದಕ್ಕೂ ಆರೈಕೆಯ ಅಗತ್ಯವಿರುವ ಯೋಧರಿಗೆ ಪ್ರತಿಷ್ಠಾನ, ಸಹಾಯಹಸ್ತ ಚಾಚುತ್ತದೆ ಎಂದರು.

<><><>

ಕಳೆದ ಡಿಸೆಂಬರ್ 23 ರಂದು ಶ್ರೀ ಸಿದ್ಧಾರೂಢರ ಜನ್ಮ ಸ್ಥಳ, ಬೀದರ್ ಜಿಲ್ಲೆ ಚಳಕಾಪುರದಿಂದ ಆರಂಭಗೊಂಡಿರುವ, ಶ್ರೀ ಆರೂಢ ಜ್ಯೋತಿ ರಥ ಯಾತ್ರೆ, ಆಂಧ್ರಪ್ರದೇಶ, ಮಹಾರಾಷ್ಟ್ರ, ಗೋವಾ ಹಾಗೂ ರಾಜ್ಯದ 16 ಜಿಲ್ಲೆಗಳಲ್ಲಿ ಸಂಚರಿಸಿ, ಇಂದು ಹುಬ್ಬಳ್ಳಿಯ ಶ್ರೀ ಮಠವನ್ನು ತಲುಪಲಿದೆ. ಇದೇ 26 ರಿಂದ ಮಾರ್ಚ್ 1ರ ವರೆಗೆ, ಶ್ರೀ ಸಿದ್ಧಾರೂಢ ಸ್ವಾಮಿ ಜಾತ್ರಾ ಮಹೋತ್ಸವ ನಡೆಯಲಿದೆ. 27 ರಂದು ಸಂಜೆ ರಥೋತ್ಸವ ಜರುಗಲಿದೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಭಕ್ತಿ ಪಂಥದ ಮಹಾಂತರಾದ, ವೃಂದಾವನದ ಚೈತನ್ಯ ಮಹಾಪ್ರಭುಗಳ ಜಯಂತಿಯನ್ನು ಇಂದು, ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತಿದೆ.

<><><>

ಶ್ರೀ ರಾಮಕೃಷ್ಣ ಪರಮಹಂಸರ ಜಯಂತ್ಯುತ್ಸವವನ್ನು ಇಂದು, ದೇಶಾದ್ಯಂತ ಶ್ರದ್ಧೆಯಿಂದ ಆಚರಿಸಲಾಗುತ್ತಿದೆ. ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯ, ಕಮರ್‌ಪುಕುರ್ ಗ್ರಾಮದಲ್ಲಿ ವಿಶೇಷ ಸಂಭ್ರಮ ಮನೆ ಮಾಡಿದೆ.

<><><>

ಕರ್ನಾಟಕ ಉಚ್ಚ ನ್ಯಾಯಾಲಯದ ಹೆಚ್ಚುವರಿ ನ್ಯಾಯಮೂರ್ತಿಯಾಗಿ, ತಾಜ್‌ಅಲಿ ಮೌಲಾಸಾಬ್ ನದಾಫ್ ಅವರು, ಬೆಂಗಳೂರಿನಲ್ಲಿ ಅಧಿಕಾರ ಸ್ವೀಕರಿಸಿದರು. ಮುಖ್ಯ ನ್ಯಾಯಮೂರ್ತಿ ಅಂಜಾರಿಯಾ ಪ್ರಮಾಣ ವಚನ ಬೋಧಿಸಿದರು.

<><><>

ರಾಷ್ಟ್ರೀಯ ರಸ್ತೆ ಸುರಕ್ಷತೆ, ಜನ ಜಾಗೃತಿ ಮಾಸಾಚರಣೆಯ, ಸಮಾರೋಪ ಸಮಾರಂಭ, ಇಂದು ರಾಜ್ಯಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಆಯೋಜಿತವಾಗಿದೆ.

<><><>

ಜೀತ ಪದ್ಧತಿ ನಿರ್ಮೂಲನಾ ದಿನದ ಅಂಗವಾಗಿ, ಇಂದು ಮಧ್ಯಾಹ್ನ 12 ಗಂಟೆಗೆ ಧಾರವಾಡ ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ, ಕಾರ್ಯಾಗಾರ ಜರುಗಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಮಾರ್ಚ್ 3 ರಿಂದ, ವಿಧಾನಮಂಡಲ ಅಧಿವೇಶನ; ಮಾರ್ಚ್ 7 ರಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಬಜೆಟ್ ಮಂಡನೆ.
- ಮುಂಬರುವ ಶೈಕ್ಷಣಿಕ ವರ್ಷದಲ್ಲಿ, 8 ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ, ವಿಶೇಷ ಕೌಶಲ ತರಗತಿ ಆರಂಭ.
- ಅರವಳಿಕೆ, ಪ್ರಸೂತಿ ಹಾಗೂ ಮಕ್ಕಳ ತಜ್ಞ ವೈದ್ಯರ, ಮಾಸಿಕ ವೇತನ ಹೆಚ್ಚಿಸಲು, ಆರೋಗ್ಯ ಇಲಾಖೆ ಕ್ರಮ.
- 'ಸಾಫ್ಟ್ ಏರಿಯಾ ರಿಲೀಸ್' ಯೋಜನೆ; ಕಾಡಾನೆ ಪುನರ್ವಸತಿಗೆ, 2 ಸಾವಿರ ಹೆಕ್ಟರ್ ಮೀಸಲಿಡಲು, ರಾಜ್ಯ ಸರ್ಕಾರದ ಚಿಂತನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>